



## ನೈತಿಕ ಸ್ಥೈರ್ಯದ ಬುನಾದಿ



ನಾನು ಓದುವುದಕ್ಕೆ ಆರಂಭಿಸಿದಾಗ ಸಾಮಾನ್ಯವಾಗಿ ಸಮಾಜದಲ್ಲಿ ಮೀಸಲಾತಿ, ಅಸ್ಪೃಶ್ಯತೆ ವಿಚಾರದಲ್ಲಿ ಮಾತ್ರ ಅಂಬೇಡ್ಕರ್ ಅವರ ಬಗ್ಗೆ ಮಾತನಾಡುತ್ತಿದ್ದರು. ದ್ವಿತೀಯ ಪಿಯುಸಿ ಓದುವಾಗ 'ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ' ಸ್ಥಾಪಕರು ಅಂಬೇಡ್ಕರ್ ಎನ್ನುವುದು ತಿಳಿಯಿತು. ಅವರ ಆರ್ಥಿಕ ವಿಚಾರಗಳನ್ನು ತಿಳಿದುಕೊಂಡೆ. ಆಗ ಅಂಬೇಡ್ಕರ್ ಬಗ್ಗೆ ಬೇರೆಯವರು ಬರೆದಿದ್ದನ್ನು ಓದುವುದಕ್ಕಿಂತ ಅವರೇ ಬರೆದಿದ್ದನ್ನು ಓದಬೇಕು ಎನಿಸಿತು. ಆಗ ಅವರು ಬರೆದ ಪುಸ್ತಕಗಳನ್ನು ಓದಿದೆ. ಅದು ನಾನು ಓದಿಗೆ ಮುಕ್ತವಾಗಿ ತೆರೆದುಕೊಳ್ಳುತ್ತಿದ್ದ ಹೊತ್ತು. ಮಾನವ ಹಕ್ಕು, ಮಹಿಳಾ ಸಮಾನತೆ ಹೀಗೆ ಬೇರೆ ಬೇರೆ ವಿಚಾರಗಳ ಬಗ್ಗೆ ಅಂಬೇಡ್ಕರ್ ಅವರ ನೋಟವನ್ನು ಗ್ರಹಿಸಿದೆ. ಅವರನ್ನು ಒಂದು ವಿಚಾರಕ್ಕೆ ಸೀಮಿತಗೊಳಿಸುವುದು ಸಾಧ್ಯವಾಗುವುದಿಲ್ಲ ಎನ್ನುವುದರ ಅರಿವಾಯಿತು. ಅಂಬೇಡ್ಕರ್ ಅವರನ್ನು ಓದಿದಂತೆ – ಅವರು ಧರ್ಮ, ಲಿಂಗ ಇತ್ಯಾದಿ ವಿಷಯಗಳ ಬಗ್ಗೆ ಜನರಲ್ಲಿರುವ ಇಗೋವನ್ನು ಮೊದಲು ಒಡೆದು ಹಾಕುವರು. ನೂರಕ್ಕೆ ನೂರರಷ್ಟು ಅವರನ್ನು ಪಾಲಿಸುತ್ತೇನೆ ಎಂದು ಹೇಳಲು ಯಾರಿಗೂ ಸಾಧ್ಯವಿಲ್ಲ. ಅಂಬೇಡ್ಕರ್ ಅವರ ಬಗ್ಗೆ ಓದಿಕೊಂಡಾಗ ಮತ್ತು ಓದುವಾಗ ಅವರಲ್ಲಿನ ಮಾನಸಿಕ ಮತ್ತು ನೈತಿಕ ಸ್ಥೈರ್ಯವನ್ನು ಶೇ. 10ರಷ್ಟು ರೂಢಿಸಿಕೊಳ್ಳಬೇಕು ಎನಿಸಿತು.

ಯಾವುದೇ ವಿಚಾರದಲ್ಲಿ ಅವರಿಗೆ ಅದರ ಬಗ್ಗೆ ಶೇ. 100 ರಷ್ಟು ಸ್ಪಷ್ಟತೆ ದೊರಕಿದ ನಂತರವೇ ಅವರು ಮುಂದುವರಿಯುತ್ತಿದ್ದರು. ಅವರಿಗೆ ಕೊಂಚವೂ ದ್ವಂದ್ವಗಳು ಇರಲಿಲ್ಲ.

—ಬಿ.ಎಂ. ಗಿರಿರಾಜ್,
ಚಲನಚಿತ್ರ ನಿರ್ದೇಶಕ, ಬೆಂಗಳೂರು

## ನಾನು ಬರೆದ ಮೊದಲ ಚಿತ್ರ



ನಾನು ಒಂದನೇ ತರಗತಿ ಓದುತ್ತಿದ್ದೆ. ನಮ್ಮೂರಿಗೆ ನಮ್ಮ ಮಾವ ತನ್ನ ಬಳಗದೊಂದಿಗೆ ಬರುತ್ತಿತ್ತು. ಮಾವನೆಂದರೆ, ಅಸ್ಪೃಶ್ಯರು ಕುಂದೂರು ಕೆರೆ ನೀರು ಮುಟ್ಟಿದ ಹೋರಾಟದ ಮೂಲಕ ಬೆಳಕಿಗೆ ಬಂದಿದ್ದ ತುಮಕೂರು ದಸಂಸ ಜಿಲ್ಲಾ ಸಂಚಾಲಕರಾಗಿದ್ದ ಕುಂದೂರು ತಿಮ್ಮಯ್ಯ. ಚಳವಳಿ ಸಂಗಾತಿಗಳೊಂದಿಗೆ ಬರುತ್ತಿದ್ದ ಮಾವ ಹಗಲು ರಾತ್ರಿ ಎನ್ನದೆ ಹೋರಾಟದ ಹಾಡುಗಳನ್ನು ಹಾಡುತ್ತಿತ್ತು. ಹಬ್ಬ ಜಾತ್ರೆ ಯಾವುದಿದ್ದರೂ ಅಷ್ಟೆ, ಊಟವೆಲ್ಲ ಮುಗಿದ ನಂತರ ಹಟ್ಟಿಮುಂದೆ ಮಲಗಿಕೊಂಡು ಕಂಜ್ರ ಬಡಿಯುತ್ತ ಅವರು ಹಾಡುತ್ತಿದ್ದರೆ ನಾವು ಆ ಹಾಡಿನ ಸಾಲುಗಳಲ್ಲಿನ ಕರುಣಾಜನಕ ಕಥನವನ್ನು ಕೇಳಿಸಿಕೊಂಡು ನಿದ್ರೆಗೆ ಜಾರುತ್ತಿದ್ದೆವು. ಹೀಗೆ ಮಾವನ ದಸಂಸ ಹೋರಾಟದ ಸಾಲುಗಳಲ್ಲಿದ್ದ ಅಂಬೇಡ್ಕರ್ ಬೇರೆ ಯಾವ ರಾಷ್ಟ್ರನಾಯಕನ ಹೆಸರು ಕೇಳುವ ಮುಂಚಿತವಾಗಿಯೇ ಕುಟುಂಬದ ಸದಸ್ಯರಂತೆ ನಮ್ಮ ಮನೆ ಮನ ತುಂಬಿಕೊಂಡರು.

ನಮ್ಮ ಮನೆಯ ಮುರುಕು ಗೋಡೆಯ ಕ್ಯಾಲೆಂಡರ್‌ನಲ್ಲಿ ನೇತಾಡುತ್ತಿದ್ದ ಅಂಬೇಡ್ಕರ್ ನೋಡಿ ನಾನು ಅದರಂತೆ ಚಿತ್ರ ಬರೆಯಲು ಪ್ರಯತ್ನಿಸಿ ಮುಖಕ್ಕೆ ಕೆಂಪು, ಕೋಟಿಗೆ ಕಡು ನೀಲಿ, ತಲೆಗೆ ಕಪ್ಪು ಬಣ್ಣ ಬಳಿದು ಮಾವ ಬಂದಾಗ ತೋರಿಸುತ್ತಿದ್ದೆ. ಮಾವ ಅದನ್ನು ದಿಟ್ಟಿಸಿ ನೋಡಿ ಶಭಾಷ್‌ಗಿರಿ ಕೊಡುತ್ತಿತ್ತು. ಈ ಬಾಲ್ಯದ ಅನುಭವವನ್ನೇ ಕವಿತೆಯಾಗಿಸಿ ಬರೆದ 'ಕಪ್ಪು ಕೆಂಪು ನೀಲಿ' ಕವಿತೆಗೆ ಪ್ರಜಾವಾಣಿ ದೀಪಾವಳಿ ವಿಶೇಷಾಂಕ ಸ್ಪರ್ಧೆಯಲ್ಲಿ ಬಹುಮಾನ ಬಂದದ್ದು ಇನ್ನೊಂದು ಸೋಜಿಗ.

ಆಗ ಸಿಕ್ಕ 'ಬಾಲಕ ಅಂಬೇಡ್ಕರ್' ಪುಸ್ತಕ ನನ್ನಿಂದ ಇನ್ನಿಲ್ಲದಂತೆ ಓದಿಸಿಕೊಂಡಿತು. ಬಹುಶಃ ನಾನು ಓದಿದ ಮೊದಲ ಗ್ರಂಥವೂ ಅದೇ. ಅದರಲ್ಲಿದ್ದ ಭೀಮನಿಗೆ ಕಟಿಂಗ್ ನಿರಾಕರಣೆ ಮಾಡಿದ್ದು, ಎತ್ತಿನ ಗಾಡಿಯಿಂದ ಉರುಳಿಸಿದ್ದು, ಈ ಎಲ್ಲ ನನ್ನ ಮನಸ್ಸಿನಲ್ಲಿ ಆಗಿನಿಂದಲೇ ಅಚ್ಚಳಿಯದ 'ನೋವಿನ ಮತ್ತು ಸ್ಫೂರ್ತಿ'ಯ ಚಿತ್ರವಾಗಿ ಉಳಿದುಬಿಟ್ಟವು.

ಹೀಗೆ ಅಂಬೇಡ್ಕರ್ ನನ್ನ ಬದುಕಿನಲ್ಲಿ ನಾನು ಬರೆದ ಮೊದಲ ಚಿತ್ರವಾಗಿಯೂ, ಓದಿದ ಮೊದಲ ಗ್ರಂಥವಾಗಿಯೂ, ಮೊದಲು ಆರಾಧಿಸಿದ ರಾಷ್ಟ್ರನಾಯಕನಾಗಿಯೂ ಉಳಿದು ಇವತ್ತಿನ ನನ್ನ ಎಲ್ಲ ನಡೆ ನುಡಿ ನಿರ್ದೇಶಿಸಿ ಬೆಳೆಸಿದ ಎರಡನೇ ಅಪ್ಪ ಅಮ್ಮನಂತಿದ್ದಾರೆ.

—ಗುರುಪ್ರಸಾದ್ ಕಂಟಲಗೆರೆ,
ಕಥೆಗಾರ, ಚಿಕ್ಕನಾಯಕನಹಳ್ಳಿ

## ಅರಿವಿನ ಅಂತರ್ಜಲ



ಅಂಬೇಡ್ಕರ್ ನನ್ನೊಳಗೆ ಮೊದಲ ಬಾರಿಗೆ ಇಳಿದದ್ದು ನಾನು ಪದವಿ ಓದುವಾಗ; ಅದೂ ಒಂದು ಸಂದಿಗ್ದ ಸನ್ನಿವೇಶದಲ್ಲಿ. ನನ್ನ ಅಪ್ಪ ಅಮ್ಮನದು ಅಂತರ್ಜಾತಿ ವಿವಾಹ. ಅಮ್ಮ ಶಾಲೆಗೆ ಸೇರಿಸುವಾಗ 'ನನಗೆ ಜಾತಿ ಇಲ್ಲ' ಎಂದು ಅರ್ಜಿಯಲ್ಲಿ ನಮೂದಿಸಿದ್ದಳು. ನಾನು ಪಿಯುಸಿಯವರೆಗೆ ಹಳ್ಳಿಯ ಶಾಲಾ ಕಾಲೇಜುಗಳಲ್ಲಿ ಓದಿದ್ದರೂ ಆ ಅಂಶ ಯಾವತ್ತೂ ನನಗೊಂದು ಸಮಸ್ಯೆಯಾಗಿರಲಿಲ್ಲ. ಮೇಷ್ಟ್ರುಗಳೂ ಅಪ್ಪ–ಅಮ್ಮನಿಗೆ ಪರಿಚಿತರೇ ಆಗಿದ್ದು, ಅವರ ಬಗ್ಗೆ ಗೌರವವಿದ್ದುದರಿಂದ ಜಾತಿ ಇಲ್ಲದವಳೆಂದು ಯಾವತ್ತೂ ಖ್ಯಾತೆ ತೆಗೆಯುತ್ತಿರಲಿಲ್ಲ. ಬದಲಿಗೆ ಹೆಚ್ಚಿನ ಗೌರವದಿಂದಲೇ ನಡೆಸಿಕೊಳ್ಳುತ್ತಿದ್ದರು. ಆದರೆ ಶಿವಮೊಗ್ಗೆಯಲ್ಲಿ ಪದವಿ ಓದುವಾಗ ಅದೊಂದು ಸಮಸ್ಯೆ ಎನ್ನುವ ಹಾಗೆ ಆಯಿತು. ಕಾಲೇಜಿನ ಕ್ಲರ್ಕ್ ಕರೆದು, 'ನೋಡು, ಜಾತಿ ಕಾಲಂ ತುಂಬದಿದ್ದರೆ ತುಂಬಾ ಸಮಸ್ಯೆಯಾಗುತ್ತದೆ. ನಾಳೆ ಟಿಸಿ ಕೊಡಲು ಬರುವುದಿಲ್ಲ, ಸರಕಾರಿ ಕೆಲಸಕ್ಕೂ ನೀನು ಅರ್ಜಿ ಹಾಕುವಂತಿಲ್ಲ' ಎಂದು ಹೆದರಿಸತೊಡಗಿದರು. ನಾನು ಯಾವುದೇ ಕಾರಣಕ್ಕೂ ಅಪ್ಪ ಅಮ್ಮನ ಎರಡು ಜಾತಿಯಲ್ಲಿ ಒಂದನ್ನು ಕೊಡಲು ತಯಾರಿರಲಿಲ್ಲ. ಆ ಕ್ಲರ್ಕ್ ಕಾಟ ತಪ್ಪಲಿಲ್ಲ. ಅವರು ಮಾತಾಡುವುದು ನೋಡಿದರೆ ಪರೀಕ್ಷೆಯನ್ನೇ ಬರೆಯಲು ಕೊಡುತ್ತಾರೋ ಇಲ್ಲವೋ ಎಂಬ ಭಯ ಹುಟ್ಟಿಸುವಂತಿತ್ತು.

ಆ ವರುಷ ನಮಗೆ ಅಂಬೇಡ್ಕರ್ ಅವರ ಪಾಠವಿತ್ತು. ಅದರಲ್ಲಿ ಅಂಬೇಡ್ಕರ್ ಭಾರತೀಯ ಸಮಾಜದ ಸ್ವಾಸ್ಥ್ಯಕ್ಕೆ ಅಂತರ್ಜಾತೀಯ ಮದುವೆಗಳು ಅತ್ಯವಶ್ಯಕ ಮತ್ತು ಅಂತರ್ಜಾತೀಯ ವಿವಾಹದಿಂದ ಪ್ರತಿಭಾನ್ವಿತ ಮಕ್ಕಳು ಜನಿಸುತ್ತಾರೆ ಎಂದು ವಿವರಿಸಿದ್ದರು. ನಾನೆಷ್ಟು ಪ್ರತಿಭಾನ್ವಿತೆಯೋ ಗೊತ್ತಿಲ್ಲ. ಆದರೆ ಆ ಪಾಠ ಓದಿದ ನಂತರ ನಾನು ಹೋಗಿ ಕ್ಲರ್ಕ್‌ಗೆ ಸ್ಪಷ್ಟವಾಗಿ ಹೇಳಿಬಂದೆ – 'ಅದೇನಾಗುತ್ತದೆಯೋ ಆಗಲಿ. ನಾನಂತೂ ನನಗಿಲ್ಲದ ಜಾತಿಯನ್ನು ಇಲ್ಲಿ ಕೊಡಲಾರೆ.'

ಅದಾಗಿ ಇಷ್ಟು ವರುಷದ ನಂತರ ಅಂಬೇಡ್ಕರ್ ಅವರನ್ನು ಅಲ್ಪಸ್ವಲ್ಪ ಓದಿದ್ದೇನೆ, ಅರಿತಿದ್ದೇನೆ. ಆದರೆ ಅವರು ಹೇಳಿದ ದಾರಿಯಲ್ಲಿ ಪೂರ್ತಿ ನಡೆದಿದ್ದೇನೆಂದು ಹೇಳಲಾರೆ. ಅದೊಂದು ಪಯಣ. ಅಲ್ಲಿ ನುಡಿ ಸುಲಭ, ನಡೆ ಕಷ್ಟ.

—ಅಕ್ಷತಾ ಹುಂಚದಕಟ್ಟೆ,
ಕವಯಿತ್ರಿ–ಪ್ರಕಾಶಕಿ, ಶಿವಮೊಗ್ಗ